## ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.1 /2024

ಪಿ.ಡಬ್ಲ್ಯೂಃ4

ಸಿಡಬ್ಲ್ಯೂ-5

ಸಾಕ್ಷಿದಾರರ ಹೆಸರು : ರಾಘವೇಂದ್ರ ಜಿರಗಾಳೆ

ತಂದೆಯ ಹೆಸರು : ಗುರುರಾಜ ಜಿರಗಾಳೆ

ವಯಸ್ಸು : 32 ವರ್ಷ

ಉದ್ಯೋಗ : ಉಪ ವಲಯ ಅರಣ್ಯಾಧಿಕಾರಿ, ಹಿಲ್ಲೂರು ಶಾಖೆ

ವಾಸ : ಹೊಸಕಂಬಿ , ಮಾಸ್ತಿಕಟ್ಟಾ, ಅಂಕೋಲಾ

ದಿನಾಂಕಃ 23-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು 2019 ರಿಂದ 2021 ತನಕ ಹೆಬ್ಬುಳಾ ಕಾಮಗಾರಿ ಮಾಸ್ತಿಕಟ್ಟಾ ವಲಯ ದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ದಿಃ2-11-2019 ರಂದು ಆ ದಿನ ನಾನು ರಾತ್ರಿ ಪಾಳಿ ಕರ್ತವ್ಯ ದಲ್ಲಿ ಇದ್ದೆ . ನಮ್ಮ ಇಲಾಖಾ ಸಿಬ್ಬಂದಿಗಳಾದ ಚಾಸಾ-6 ಮತ್ತು 7 ರವರೊಂದಿಗೆ ನಾನು ಇಲಾಖಾ ಗಸ್ತು ಜೀಪ ನಲ್ಲಿ ಗಸ್ತು ತಿರುಗುತ್ತಿರುವಾಗ ದಿಃ3-11-2019 ರಂದು ಬೆಳಗಿನ ಜಾವ 2-00 ರಿಂದ 2-30 ರ ಸಮಯದಲ್ಲಿ ಸುಂಕಸಾಳ ಪಂಚಾಯತಿ ಎದುರುಗಡೆ ಇರುವಂತಹ ರಾಷ್ಟ್ರಿಯ ಹೆದ್ದಾರಿ -63 ಯಲ್ಲಿ ಅಂಕೊಲಾ ಕಡೆ ಮುಖ ಮಾಡಿ ಕೊಂಡು ಒಂದು ಸ್ಕಾರ್ಪಿಯೋ ವಾಹನ ನಿಂತು ಕೊಂಡಿತ್ತು ಆ ಸಮಯದಲ್ಲಿ ನಮಗೆ ಸ್ವಲ್ಪ ಅನುಮಾನ ಬಂದಿತು . ಆಗ ನಾನು ಚಾಸಾ -7 ರವರಿಗೆ ಆ ವಾಹನ ಸ್ವಲ್ಪ ಪರಿಶೀಲನೆ ಮಾಡಿ ನೊಡಿ ಎಂದು ಹೇಳಿದೆ . ಅವರು ಆ ವಾಹನವನ್ನು ಪರಿಶೀಲನೆ ಮಾಡಿ ನೋಡಿದಾಗ ಸದ್ರಿ ಸ್ಕಾರ್ಪಿಯೊ ವಾಹನದ ಕಿಟಕಿಯ ಗ್ಲಾಸ ಒಳಗಡೆ ಟಾರ್ಚ ಹೊಡೆದು ನೋಡಿದಾಗ ಮಾಂಸ ಇರುವುದು ಕಂಡು ಬಂದಿರುತ್ತದೆ . ಆ ಮಾಂಸ ಸಾರ್ಪಿಯೊ ವಾಹನದ ಹಿಂದಿನ ಸೀಟ ನ್ನು ತೆಗೆದಿದ್ದರು ಮಧ್ಯ ಭಾಗದ ಸೀಟ ನಲ್ಲಿ ಬಿಳಿ ಬಣ್ಣದ ಸಿಮೆಂಟ

ಚೀಲದಲ್ಲಿ ಮಾಂಸ ಇರುವುದು ಕಂಡು ಬಂದಿತು . ನಂತರ ಅವರು ನನ್ನನ್ನು ಅಲ್ಲಿಗೆ ಕರೆದಿರುತ್ತಾರೆ . ಆಗ ನಾನು ಪರಿಶೀಲನೆ ಮಾಡಿ ನೋಡಿದಾಗ ಸದ್ರಿ ಸ್ಕಾರ್ಪಿಯೋ ವಾಹನದ body ಮೇಲೆ ವಾಹನಗಳು ಕಾಡಿಗೆ ಹೋದಾಗ ಆಗುವಂತಹ ಸ್ಕ್ರೆಚ ಗಳು ಆಗಿರುವುದು ಕಂಡು ಬಂದಿರುತ್ತದೆ . ನಾವು ಪುನಃ detail ಅಗಿ ಪರೀಶಿಲನೆ ಮಾಡಿದಾಗ ಸ್ಕಾರ್ಪಿಯೊ ವಾಹನದ ಮುಂದಿನ ಭಾಗದಲ್ಲಿ ಹೆಡ್ ಟಾರ್ಚ ಇರುವುದು ಕಂಡು ಬಂದಿರುತ್ತದೆ . ಗಾಡಿ ಒಳಗಡೆ ರಕ್ತದ ಹನಿಗಳು ಬಿದ್ದಿರುವುದು ಕಂಡು ಬಂದಿರುತ್ತದೆ ಅಲ್ಲಲ್ಲಿ ವನ್ಯ ಪ್ರಾಣಿಗಳ ಕೂದಲು ಸಹ ಇತ್ತು . . ಆಗ ನಾನು ಅಲ್ಲಿಗೆ ಸಂಬಂಧಿಸಿದತಹ ಚಾಸಾ –1 ರವರಿಗೆ ಕರೆ ಮಾಡಿ ವಿಷಯ ತಿಳಿಸಿರುತ್ತೇನೆ . ಆ ಸಮಯದಲ್ಲಿ ಚಾಸಾ –1 ಮತ್ತು 2 ರವರು ಬಂದಿರುತ್ತಾರೆ . ನಂತರ ಚಾಸಾ –3 ಮತ್ತು 4 ರವರನ್ನು ಪಂಚರನ್ನಾಗಿ ಕರೆಸಿದ್ದು ನಂತರ ನಾವುಗಳು ಆ ಜಾಗದಲ್ಲಿ ಯಾರು ಇಲ್ಲದೆ ಇರುವ ಕಾರಣ ಹಾಗೆ ಬೆಳಿಗ್ಗ 6–30 ರವರೆಗೆ ಕಾಯುತ್ತಾ ಕುಳಿತೆವು . ಆ ಸಮಯದಲ್ಲಿ 1 ರಿಂದ 3 ಆರೊಪಿಗಳು ನಾವು ಕಾಯುತ್ತಿರುವ ಸ್ದಳಕ್ಕೆ ಬಂದಿರುತ್ತಾರೆ . ಅವರುಗಳು ವಾಹನನ್ನು ಹತ್ತಬೇಕು ಎಂದು ಹೋದಾಗ ನಾವೆಲ್ಲರೂ ಸೇರಿ ಅವರನ್ನು ಹಿಡಿದಿರುತ್ತೇವೆ . ನಂತರ ಸದ್ರಿ ಯವರ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಅವರುಗಳು ತಮ್ಮಗಳ ಹೆಸರು ಮತ್ತು ವಿಳಾಸ ಹೇಳಿರುತ್ತಾರೆ . ಆ ಸಮಯದಲ್ಲಿ ಈ ವಾಹನ ಯಾರದ್ದು ಎಂದು ಕೇಳಿದಾಗ ಸೋಮನಾಥ ಶೇಟ (1 ನೇ ಅರೋಪಿ )ತನ್ನದು ಎಂದು ಹೇಳಿರುತ್ತಾರೆ . ಆ ಮಾಂಸವನ್ನು ಯಾರು ಎಲ್ಲಿಂದ ತಂದು ಕೊಟ್ಟಿದ್ದು ಎಂದು ಕೇಳಿದಾಗ ನಮ್ಮಲ್ಲಿ ಕೆಲಸ ಮಾಡುತ್ತಿರುವ ಒಬ್ಬ ವ್ಯಕ್ತಿ ತಂದು ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ ಅವರನ್ನು ಯಾವ ಪ್ರಾಣಿಯ ಮಾಂಸ ಎಂದು ವಿಚಾರಿಸಿದಾಗ ಅದು ಕಾಡು ಕುರಿಯ ಮಾಂಸ ಎಂದು ಹೇಳಿರುತ್ತಾರೆ . ಆ ನಂತರ ನಾವು ಪಂಚರ ಸಮಕ್ಷಮ ಸದ್ರಿ ವಾಹನ , ಮಾಂಸ , 8 ಕಾಟ್ರೆಜ್ ಅದರಲ್ಲಿ 2 ಚಾಲನಾ ಸ್ತಿತಿಯಲ್ಲಿ ಇದ್ದವು . ಹೆಡ ಟಾರ್ಚ , 2 ಮೊಬೈಲ ಅದರಲ್ಲಿ ಒಂದು ಲಾವಾ ಮತ್ತೊಂದು ನೊಕಿಯಾ ಮೊಬೈಲ ಸೆಟ್ ಆಗಿರುತ್ತದೆ . ಆ ಸಮಯದಲ್ಲಿ ಚೆರಿ ತುಂಬಲು ಬೇಕಾದ ಒಂದು ಕಬ್ಬಿಣದ ರಾಡ್ ಇಟ್ಟು ಕೊಂಡಿದ್ದರು ಅದನ್ನು ಅಮಾನತು ಪಡಿಸಿಕೊಂಡೆವು . ಆ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ ಈಗಾಗಲೆ ಗುರುತಿಸಲಾಗಿದ್ದ ನಿಪಿ–2 ನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿ ರುವ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ–2 (ಡಿ )ಎಂದು ಗುರುತಿಸಲಾಯಿತು .ಆ

ಸಮಯದಲ್ಲಿ ಪೊಟೊ ತೆಗೆದು ಕೊಳ್ಳಲಾಗಿತ್ತು ಆ ಪೊಟೊಗಳು ಈಗಾಗಲೆ ನಿಪಿ–3 ರಿಂದ 6 ಎಂದು ಗುರುತಿಸಲಾಯಿತು . ಸಾಕ್ಷಿಗೆ ನಿಪಿ–3 ರಲ್ಲಿರುವ ಪರಿಕರ ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನಿಪಿ–4 ರಲ್ಲಿರುವ ವಾಹನ ನೋಡಿ ಗುರುತಿಸಿರುತ್ತಾರೆ . ಸದ್ರಿ ಸ್ಕಾರ್ಪಿಯೊ ವಾಹನದ ನಂ ಕೆಎ–31/ಎಮ್ 4023 ಯಾಗಿರುತ್ತದೆ . ಸದ್ರಿ ಮಾಂಸವನ್ನು ಮಾಗೋಡ ದಿಂದ ಬೇಟೆಯಾಡಿ ತರಲಾಗಿತ್ತು ಎಂದು ನನಗೆ ನಂತರ ತಿಳಿದುಬಂದಿತು . ಸದ್ರಿ ಮಾಂಸವನ್ನು ತಂದು ಕೊಟ್ಟವರು 4 ನೇ ಆರೋಪಿ ಗಣಪತಿ ಶೇಟ ಆಗಿರುತ್ತಾರೆ ಎಂದು ನಂತರ ಗೊತ್ತಾಯಿತು .

**ಪಾಟೀ ಸವಾಲುಃ ಆರೋಪಿತರ ಪರ ಃ ಶ್ರೀ ಎಸ್ ಆರ್ ಎನ್ ವಕೀಲರಿಂದ ಃ**

3. ನನಗೆ ಸುಂಕಸಾಳ ಊರಿನ ಪರಿಚಯ ಇತ್ತ ಏಕೆಂದರೆ ನಾನು ಆಗ ಕರ್ತವ್ಯ ಬಂದು ಹೆಚ್ಚು ಕಡಿಮೆ 1 ವರ್ಷ ವಾಗಿತ್ತು . ಸದ್ರಿ ಪೊಟೊಗಳನ್ನು ಯಾರು ಹೊಡೆದಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಆ ಪೊಟೊಗಳನ್ನು ನನ್ನ ಮುಂದೆ ಹೊಡೆದಿರುತ್ತಾರೆ ಆದರೆ ನಿಖರವಾಗಿ ಯಾರು ಹೊಡೆದಿರುತ್ತಾರೆ ಎಂದು ನನಗೆ ನೆನಪಿಗೆ ಬರುತ್ತಿಲ್ಲ . ಸದ್ರಿ ಪೊಟೊವನ್ನು ಯಾರು ಹೊಡೆದಿರುತ್ತಾರೆ ಎಂದು ನಿಪಿ–2 ರ ಪಂಚನಾಮೆ ಯಲ್ಲಿ ನಮೂದು ಮಾಡಿಲ್ಲ . ಯಾವುದಾದರೂ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ಪೊಟೊ ಹೊಡೆದರೆ ಅದನ್ನು ಪಂಚನಾವೆ ಮಾಡುವ ಕಾಲಕ್ಕೆ ಪಂಚನಾಮೆಯಲ್ಲಿ ಬರೆಯುವುದು ನಿಮ್ಮ ಆದ್ಯ ಕರ್ತವ್ಯ ಎಂದರೆ ಹೌದು ಅದರ ಬಗ್ಗೆ ನನಗೆ ಗೊತ್ತಾಗಲಿಲ್ಲ .ನಿಪಿ–3 ರ ಪೊಟೊದಲ್ಲಿ ಒಂದು ಕೂದಲು ಸಹ ಕಾಣಿಸುವುದಿಲ್ಲ ಎಂದರೆ ಪೊಟೊ ದಲ್ಲಿ ಕಾಣುವುದಿಲ್ಲ ಆದರೆ ನಾವು ನೋಡಿದ ಸ್ಥಳದಲ್ಲಿ ಪೊಟೊ ದಲ್ಲಿ ಕೂದಲು ಇತ್ತು . ನನ್ನ ಪ್ರಕಾರ ಪೊಟೊದಲ್ಲಿ ಕೂದಲು ಗಳು ಕಾಣುತ್ತಿಲ್ಲ ಎಂದರೆ ನೀವು ನಿಪಿ–3 ರ ಪೊಟೊ ವನ್ನು ತೆಗೆಯುವಾಗ ಕೂದಲು ತೆಗೆದು ಪೊಟೊ ತೆಗೆದಿರುತ್ತಿರಾ ಎಂದರೆ ಆ ಸಮಯದಲ್ಲಿ ಅಲ್ಲಿ ಕೂದಲು ಇರಲಿಲ್ಲ . ನಿಪಿ–5 ರ 2 ನೇ ಪೊಟೊದಲ್ಲಿ ಕೂದಲು ಕಾಣಿಸಿರುತ್ತದೆ ಎಂದರೆ ಅದು ಕೂದಲು ಅಲ್ಲ ಅದು ಮಾಂಸ ವಾಗಿರುತ್ತದೆ. ಸದ್ರಿ ಮಾಂಸವು ಯಾವ ಭಾಗದ್ದು ಎಂದರೆ ನಿಖರವಾಗಿ ಹೇಳಲು ಅಗುವುದಿಲ್ಲ .ಆದರೆ ಆ ವನ್ಯ ಪ್ರಾಣಿಯ ಕಾಲಿನ ಭಾಗ ವಾಗಿರಬಹುದು .ಸದ್ರಿ ಪೊಟೊದಲ್ಲಿ ಕಾಣುತ್ತಿರುವುದು ಕೂದಲು ಇರುವ ಭಾಗ ನಿಮ್ಮ ಕಣ್ಣಿನ ದೋಷದಿಂದ ಅದು ಕಾಣುತ್ತಿಲ್ಲ ಹಾಗಾಗಿ ನೀವು ಮಾಂಸ ಎಂದು ಹೇಳುತ್ತಿದ್ದೀರಿ ಎಂದರೆ

ಸರಿಯಲ್ಲ .. ನಿಪಿ-5 ರ 2 ನೇ ಪೊಟೊದಲ್ಲಿ ರುವ ಪರಿಕರವು ಸಂಪೂರ್ಣವಾಗಿ ಕಪ್ಪಿನಿಂದ ಕೂಡಿರುತ್ತದೆ ಎಂದರೆ ಅದು ಕಪ್ಪು ಅಲ್ಲ ಅದು ಕಡು ಕೆಂಪಿನ ಭಾಗ ಆಗಿರುತ್ತದೆ . ಆ ರೀತಿ ಕಡು ಕೆಂಪಿನ ಭಾಗ ಅಥವಾ ಕಪ್ಪಿನ ಭಾಗ ಇರುವ ಮಾಂಸ ಎಂದು ಮಹಜರ ದಲ್ಲಿ ಬರೆಸಿರುತ್ತಿರಾ ಎಂದರೆ ಇಲ್ಲ . ಈ ಮಾಂಸವನ್ನು ನಿವೇ ಸೃಷ್ಟಿಸಿರುವುದರಿಂದ ಆ ಪ್ರಕಾರವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಕುರಿ ಮಾಂಸ ಮತ್ತು ಕೋಳಿ ಮಾಂಸ ಸುಂಕಸಾಳ ಗ್ರಾಮದಲ್ಲಿ ಸಿಗುತ್ತದೆ ಎಂದರೆ ಸರಿ . ಯಾವುದೇ ಒಂದು ಮಾಂಸದ ಅಂಗಡಿಗೆ ಹೋಗಿ ನನಗೆ 5 ಕಿಲೊ , 200 ಗ್ರಾ ಮಾಂಸ ಕೊಡಿ ಎಂದರೆ ಕೊಡುತ್ತಾರೆ . ನಿಮಗೆ ಯಾವುದೆ ಒಂದು ಮಾಂಸ ತೂಕ ಮಾಡದೆ ಇಷ್ಟು ಇರುತ್ತದೆ ಎಂದು ಹೆಳಲು ಬರುತ್ತದಾ ಎಂದರೆ ಇಲ್ಲ . ಅಂತಹ ಪರಿಣಿತರು ನಿಮ್ಮ ಇಲಾಖೆಯಲ್ಲಿ ಇರುತ್ತಾರಾ ಎಂದರೆ ಇಲ್ಲ . ನಿಮ್ಮ ಪ್ರಕಾರ ಆ ಮಾಂಸವನ್ನು ತೂಕ ಮಾಡಿದ ಬಗ್ಗೆ ದಾಖಲೆಯನ್ನು ಇಟ್ಟು ಕೊಂಡಿರುತ್ತಿರಾ ಎಂದರೆ ಹೌದು ಅದನ್ನು ಮಹಜರ ದಲ್ಲಿ ಬರೆದಿರುತ್ತೇವೆ . ಸದ್ರಿ ತೂಕದ ಯಂತ್ರವನ್ನು ನಾವು ಅಂಗಡಿಯಿಂದ ತೆಗೆದು ಕೊಂಡು ಬಂದಿಲ್ಲ ನಮ್ಮ ಕಚೇರಿಯಿಂದ ತಂದಿರುತ್ತೇವೆ . ನಮ್ಮ ಮಾಸ್ತಿಕಟ್ಟಾ ಕಚೇರಿಯಲ್ಲಿ ತಕ್ಕಡಿ ಇರುತ್ತದೆ . ಪಂಚನಾಮೆ ಬರೆದೆವು ಎಂದು ಹೇಳಲಾದ ಸಮಯದಲ್ಲಿ ನೀವು ತೂಕ ಮಾಡಿ ನೋಡಿರುತ್ತಿರಾ ಎಂದರೆ ಅಲ್ಲಿ ನಾವು ತೂಕ ಮಾಡಿ ನೋಡಿಲ್ಲ . ಆದರೆ ಮಾಸ್ತಿಕಟಾಟ ಕಚೇರಿಯಲ್ಲಿ ತೂಕ ಮಾಡಿ ನೋಡಿರುತ್ತೆವೆ ಸುಂಕಸಾಳ ದಿಂದ ಮಾಸ್ತಿಕಟ್ಟಾ ಕಚೇರಿ 8-9 ಕಿಲೊಮೀಟರ ದೂರದಲ್ಲಿ ಇರುತ್ತದೆ . ಪಂಚನಾಮೆ ಕ್ರಮ ನೀವು ಸ್ಥಳದಲ್ಲಿ ಮಾಡಿ ಮುಗಿಸಿಲ್ಲ ಎಂದರೆ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿ ಮುಗಿಸಲಿಲ್ಲ ಆದರೆ ತೂಕವನ್ನು ಮಾಸ್ತಿಕಟ್ಟಾ ಕಚೇರಿಯಲ್ಲಿ ಮಾಡಲಾಗಿರುತ್ತದೆ . ಸದ್ರಿ ಪಂಚರ ಸಹಿಯನ್ನು ನಿಪಿ-2 ಕ್ಕೆ ಮಾಸ್ತಿಕಟ್ಟಾ ಕಚೇರಿಯಲ್ಲಿ ಪಡೆದು ಕೊಳ್ಳಲಾಗಿರುತ್ತದೆ . ಈ ವಿಷಯವನ್ನು ಪಂಚನಾಮೆಯಲ್ಲಿ ಬರೆಸಿರುತ್ತಿರಾ ಎಂದರೆ ನನಗೆ ನೆನಪಿಗೆ ಬರುತಿಲ್ಲ . ಪಂಚನಾಮೆಯನ್ನು ಯಾವ ಸಮಯದಿಂದ ಯಾವ ಸಮಯದವರೆಗೆ ಮಾಡಲಾಗಿದೆ ಎಂದು ಬರೆದಿರುತ್ತಿರಾ ಎಂದರೆ ಇಲ್ಲ . ಅದು ಮಾಸ್ತಿಕಟ್ಟಾದಲ್ಲಿ ಎಂದು ಹೇಳಲು ಪಂಚನಾಮೆಯಲ್ಲಿ ಬರೆಯಲಿಲ್ಲ ಎಂದರೆ ಸರಿ . ಇಂತಹ ಪ್ರಕರಣ ಗಳನ್ನು ಸೃಷ್ಟಿ ಮಾಡುವಾಗ ಇದೆಲ್ಲಾ ಸುಳ್ಳುಗಳು ನಡೆಯುತ್ತವೆ ಎಂದರೆ ಸರಿಯಲ್ಲ . ಪೊಟೊ ಹೊಡೆಯಬೇಕಾದರೆ ಕ್ಯಾಮೆರಾ ಬೇಕಾಗುತ್ತದೆ ಹಾಗೆನಿಲ್ಲ ಮೊಬೈಲ ದಲ್ಲೂ ಕೂಡ

ಪೋಟೊ ಹೊಡೆಯಬಹುದು . ನೀವು ಸರಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಯಾರ ಮುಖಾಂತರ ಯಾವ ಕಂಪನಿಯ ಮೊಬೈಲ ಮೂಲಕ ಪೋಟೊ ಹೊಡೆಯಲಾಗಿರುತ್ತದೆ ಎಂದು ಮಹಜರದಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ . ಆ ಬೊಬೈಲ ಮೂಲಕ ಪೋಟೊ ತೆಗೆಯಲಾಗಿರುತ್ತದೆ ಎಂದು ಮಹಜರ ದಲ್ಲಿ ನಮೂದು ಮಾಡಿರುತ್ತಿರಾ ಎಂರೆ ನನಗೆ ಗೊತ್ತಿಲ್ಲ .

4. ಸದ್ರಿ ವಾಹನಕ್ಕೆ ಸ್ಕ್ರೆ ಚಸ್ ಆಗಿದ್ದರ ಬಗ್ಗೆ ಮಹಜರ ದಲ್ಲಿ ನಮೂದು ಮಾಡಿರುತ್ತಿರಾ ಎಂದರೆ ಹೌದು. ಸದ್ರಿ ಸ್ಕ್ರೆಚಸ್ ಗಳು ಸಾಮಾನ್ಯವಾಗಿ ಅರಣ್ಯಕ್ಕೆ ಹೋದರೆ ಮಾತ್ರ ಆಗುವ ಸಾಧ್ಯತೆ ಇರುತ್ತದೆಯಾ ಅಥವಾ ಬೇರೆ ಕಡೆ ಗಳಲ್ಲಿ ಹೋದರೂ ಆಗುವ ಸಾಧ್ಯತೆ ಇರುತ್ತದೆಯಾ ಎಂದರೆ ಆಗಬಹುದು . ಹಳೆಯ ವಾಹನಗಳು ಇದ್ದರೆ ಆ ವಾಹನಗಳು ಸ್ಕ್ರೆಚಸ್ ಗಳು ಮತ್ತು ತಿಕ್ಕಿ ಕೊಳ್ಳುವುದು ಸಾಮಾನ್ಯ ಎಂದರೆ ಆದರೆ ಆ ವಾಹನಕ್ಕೆ ಎಲೆಗಳ ಟೊಂಗೆ ಗಳು ಮತ್ತು ಎಲೆಗಳು ಸಿಕ್ಕಿ ಹಾಕಿ ಕೊಂಡಿದ್ದವು ಆ ಕಾರಣದಿಂದ ಆ ವಾಹನ ಅರಣ್ಯಕ್ಕೆ ಹೊಗಿದ್ದು ಎಂದು ಹೇಳುತ್ತಿದ್ದೇನೆ . ನಿಮ್ಮ ಇಲಾಖಾ ವಾಹನವು ನ್ಯಾಯಾಲಯ ಮುಂದೆ ನಿಲ್ಲಿಸಿದಾಗ ಎಲೆಗಳು ಬಿದ್ದರೆ ಅದು ಅರಣ್ಯದಿಂದ ಆ ವಾಹನ ಬಂದಿತ್ತು ಆ ಎಲೆಗಳು ಅರಣ್ಯದ್ದೆ ಎಂದು ಹೇಳುತ್ತಿರಾ ಎಂದರೆ ಎಲೆಗಳು ಮೇಲಿನಿಂದ ಬಿಳುವುದಕ್ಕೂ ಮತ್ತು ಆ ವಾಹನ ಅರಣ್ಯದಲ್ಲಿರುವ ಮರಗಳೊಂದಿಗೆ ತಿಕ್ಕಿಕೊಂಡು ಹೋಗುವುದಕ್ಕೂ ವ್ಯತ್ಯಾಸ ಇರುತ್ತದೆ . ಸದ್ರಿ ವಾಹನದ ಮೇಲುಗಡೆ ಸ್ಟ್ಯಾಂಡ ಇತ್ತಾ ಅಥವಾ ಖಾಲಿ ಆಗಿತ್ತಾ ಎಂದರೆ ಅದು ಪ್ಲಾಟ್ ಆಗಿ ಖಾಲಿಯಾಗಿತ್ತು . ಆ ವಾಹನದ ಹಿಂದುಗಡೆ ಭಾಗದಲ್ಲಿ ಎಲೆಗಳು ಸಿಕ್ಕಿ ಹಾಕಿ ಕೊಂಡಿದ್ದವು . ನಿಪಿ-4 ರ ಪೋಟೊದಲ್ಲಿ ಆ ವಾಹನದ ಹಿಂಭಾಗದಲ್ಲಿ ಎಲೆಗಳು ಸಿಕ್ಕಿ ಹಾಕಿ ಕೊಂಡಿರುವುದು ಕಾಣಿಸುತ್ತದೆಯಾ ಎಂದರೆ ಇಲ್ಲ . ಕಾಡಿನಿಂದ ಬಂದಿದ್ದಾವೆ ಎಂದು ಹೇಳಲಾದ ಎಲೆಗಳು ತನಿಖೆಯ ಕಾಲಕ್ಕೆ ತುಂಬಾ ಮುಖ್ಯ ಪಾತ್ರ ವಹಿಸುತ್ತದೆ ಎಂದರೆ ಸರಿ . ಸದ್ರಿ ಎಲೆಗಳನ್ನು ನೀವು ಅಮಾನತ್ತು ಪಡಿಸಿಕೊಂಡಿರುತ್ತಿರಾ ಎಂದರೆ ಇಲ್ಲ . ಇವೆಲ್ಲಾ ನೀವು ಸುಳ್ಳು ಪ್ರಕರಣ ಸೃಷ್ಟಿ ಮಾಡಿರುವುದರಿಂದ ಎಲೆಗಳು ವಾಹನಕ್ಕೆ ಸಿಕ್ಕಿ ಹಾಕಿಕೊಂಡಿದ್ದು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಇಲ್ಲ .

5. ಸುಂಕಸಾಳದಲ್ಲಿರುವ ಸಾಕಷ್ಟು ಜನರ ವೈಯಕ್ತಿಕ ಪರಿಚಯ ಇರುತ್ತದೆ ಎಂದರೆ ನನಗೆ ವೈಯಕ್ತಿಕವಾಗಿ ಅವರ ಹೆಚ್ಚಿನ ಪರಿಚಯ ಇಲ್ಲ ಎಕೆಂದರೆ ನನ್ನ ವಲಯ ಮಾಸ್ತಿಕಟ್ಟಾ ಬರುತ್ತದೆ ಹಾಗಾಗಿ ಸುಂಕಸಾಳದವರ

ಹೆಚ್ಚಿನ ಪರಿಚಯ ಇರುವುದಿಲ್ಲ . ಸದ್ರಿ ಚಾಸಾ -2 ಮತ್ತು 3 ರವರು ಸಾಮಾನ್ಯವಾಗಿ ಅರಣ್ಯದ ಎಲ್ಲಾ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಯಾಕೆ ಇರುತ್ತಾರೆ ಎಂದರೆ ಸರಿಯಲ್ಲ . ಮತ್ತು ಅವರು ನಿಮ್ಮ ಇಲಾಖೆಯ ದಿನಗೂಲಿ ನೌಕರರು ಎಂದರೆ ಹೌದು . ಸದ್ರಿ ದಿನಗೂಲಿ ನೌಕರರಿಗೆ ನೀವು ಕೆಲಸ ಕೊಟ್ಟರೆ ಮಾತ್ರ ಅವರಿಗೆ ಸಂಬಳ ಎಂದರೆ ಸರಿ . ಹಾಗಾಗಿ ಅವರು ನೀವು ಎಲ್ಲಿ ಕರೆದರೂ ಎಷ್ಟೆ ಸಮಯದಲ್ಲಿ ಕರೆದರೂ ಅವರು ಬರುತಾರೆ ಎಂರೆ ಸರಿಯಲ್ಲ .

6. ಪವಾರ ಎಂಬುವವರು ಈ ಪರರಣದ 2 ವರ್ಷಗಳ ಮೊದಲಿನಿಂದಲೂ ಸುಂಕಸಾಳದಲ್ಲಿ ಉಳಿಯುತ್ತಿದ್ದರು ಎಂದರೆ 2 ವರ್ಷದ ಮೊದಲಿನಿಂದಲೂ ಅಲ್ಲ ಒಂದು ವರ್ಷದ ಮೊದಲಿನಿಂದ ಸುಂಕಸಾಳ ಕ್ವಾಟರ್ಸ ದಲ್ಲಿ ಉಳಿಯುತ್ತಿದ್ದರು ಅವರಿಗೂ ಸಹ ಸುಂಕಸಾಳದವರ ಗ್ರಾಮಸ್ಥರ ಪರಿಚಯ ಇರುತ್ತದೆ ಎಂದರೆ ಅದು ಅವರಿಗೆ ಗೊತ್ತು . ಸದ್ರಿ ನೀವು ಹೇಳುವಂತಹ ಚಾಸಾ 3 ಮತ್ತು 4 ರವರು ಸ್ಥಳಿಕರಲ್ಲ ಎಂದರೆ ಅವರು ಅಲ್ಲಿಯ 2-3 ಕಿಮೀಟ ರ ವ್ಯಾಪ್ತಿಯ ಒಳಗಿನವರು . ಆ ದಿನ ನಿಜವಾಗಿಯೂ ಆ ಘಟನೆ ನಡೆದಿದ್ದಾಗ ಸುಂಕಸಾಳದ ಗ್ರಾಮಸ್ಥರನ್ನು ಪಂಚರನ್ನಾಗಿ ಕರೆದು ಕೊಳ್ಳಲು ನಿಮಗೆ ತೊಂದರೆ ಇರಲಿಲ್ಲಾ ಎಂದರೆ ರಾತ್ರಿ ಯಾಗಿತ್ತು ಆ ಕಾರಣದಿಂ ಕರೆಯಲಿಲ್ಲ ಸುಂಕಸಾಳದ ಗ್ರಾಮ ಪಂಚಾಯತಿಯ ಎದುರುಗಡೆ ಸಾಕಷ್ಟು ಜನವಸತಿ ಹಾಗೂ ಮನೆಗಳು ಇರುವಂತಹ ಪ್ರದೇಶ ಎಂದರೆ ಸರಿ . ನೀವಾಗಲಿ ನಿಮ್ಮ ಸಿಬ್ಬಂದಿಗಳಾಗಲಿ ಅಕ್ಕಪಕ್ಕದ ಅಲ್ಲೆ ಇರುವ ಮನೆಯವರನ್ನು ಕರೆಯುವ ಪ್ರಯತ್ನ ಮಾಡಿರುತಿರಾ ಎಂದರೆ ಇಲ್ಲ . ಎಕೆಂದರೆ ಎಲ್ಲಾ ಸ್ಥಳಿಕರಾಗಿರುವುದರಿಂದ ಅವರುಗಳು ಬರುವುದಿಲ್ಲ .ಆ ರೀತಿ ಪ್ರಯತ್ನ ಮಾಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸರಿ . ಸ್ಥಳಿಕರು ಬಂದರೆ ನೀವು ಕಟ್ಟಿದ ಕಥೆ ಹೊರ ಬಿಳುತ್ತದೆ ಎಂಬ ಕಾರಣದಿಂದ ಸ್ಥಳಿಕರನ್ನು ಪಂಚರನ್ನಾಗಿ ಕರೆಯಲಿಲ್ಲ ಎಂದರೆ ಸರಿಯಲ್ಲ . ಒಂದು ಮಾಂಸ ಕಂಡರೆ ಅದು ಇಂತಹದ್ದೆ ಪ್ರಾಣಿಯದ್ದು ಎಂದು ತಕ್ಷಣ ಹೇಳುವಂತಹ ತರಬೇತಿ ನನಗೆ ಇಲ್ಲ .ಯಾರಾದರೂ ಮಾಂಸವನ್ನು ಊರಿನಿಂದ ತಂದಿದ್ದು ಎಂದು ಹೇಳಿದರೆ ಊರಿನ ಮಾಂಸ ಎಂದು ಬರೆಯುತ್ತಿರಾ ಎಂದರೆ ಈ ಪ್ರಕರಣದಲ್ಲಿರುವ ಆರೋಪಿಗಳು ಅವರೆ ಕಾಡು ಕುರಿಯ ಮಾಂಸ ಎಂದು ಹೇಳಿರುತ್ತಾರೆ . ಸದ್ರಿ ಮಾಂಸಕ್ಕೆ ಗನ್ ನಿಂದ ಹೊಡೆದು ಚೆರಿಗಳು ತಗುಲಿ ಅವುಗಳು ಮಾಂಸದಿಂದ ಸಿಡಿದ ಬಗ್ಗೆ ಕುರುಗಳು ಇತ್ತಾ ಎಂದರೆ ಅದನ್ನು ಆಗಲೆ ಚರ್ಮ ಸುಳಿದು

ಮಾಂಸ ವನ್ನು ಮಾಡಿ ಚೀಲದಲ್ಲಿ ತಂದಿದ್ದರಿಂದ ನನಗೆ ಅದರ ಬಗ್ಗೆ ಗೊತ್ತಾಗಲಿಲ್ಲ . ಯಾವುದೆ ಮಾಂಸವನ್ನು ತಂದರೆ ಒಂದು ವೆಳೇ ಅದನ್ನು ಗುಂಡಿದಿಂದ ಹೊಡೆದಿದ್ದರೆ ಆ ಗುಂಡು ಮಾಂಸ ಒಳಗೆ ಹೋಗುತ್ತದೆ ಎಂದರೆ ಸರಿ . ಆ ಚೆರಿಗಳು ಸ್ಪೊಟ ಗೊಂಡಾಗ ಆ ಪ್ರಾಣಿಯ ದೇಹದ ಇಡಿ ಭಾಗಕ್ಕೆ ಅದು ಹರಡುತ್ತದೆ ಎಂದರೆ ಯಾವ ದೂರದಿಂದ ಮತ್ತು ಯಾ ತರಹವಾಗಿ ಅವರು ಗನ್ ದಿಂದ ಹಲ್ಲೆ ಮಾಡಿರುತ್ತಾರೆ ಅದರ ಮೇಲೆ ಅದು ಅವಲಂಬಿತವಾಗಿರುತ್ತದೆ .

6. ನಿಮ್ಮ ಕರ್ತವ್ಯ ವನ್ನು ನಿರ್ವಹಿಸುತ್ತಿರುವಾಗ ಎಲ್ಲಿಂದ ಎಲ್ಲಿಯವರೆಗೆ ಯಾವ ಸ್ಥಳಕ್ಕೆ ನೀವು ಎಷ್ಟು ಗಂಟೆ ಕಾಲ ಕರ್ತವ್ಯ ನಿರ್ವಹಿಸುತ್ತಿರಿ ಎಂದು ನಿಮ್ಮ ಇಲಾಖಾ ದಿನಚರಿಯಲ್ಲಿ ಇರುತ್ತದೆ ಎಂದರೆ ಸರಿ . ಮತ್ತು ಅದನ್ನು ಮೇಲಾಧಿಕಾರಿಗಳಿಗೆ ಲಿಖಿತವಾಗಿ ಕೊಡಬೇಕಾಗುತ್ತದೆ ಎಂದರೆ ಸರಿ . ಅಂತಹ ಯಾವುದಾದರೂ ದಾಖಲಾತಿ ನ್ಯಾಯಾಲಯದ ಮುಂದೆ ಇರುತ್ತದೆಯಾ ಎಂದರೆ ಇಲ್ಲ . ನೀವು ಕರ್ತವ್ಯದ ಮೇಲೆ ಆ ದಿನ ಇದ್ದಿದ್ದರೆ ಅದು ತುಂಬಾ ಮುಖ್ಯವಾದ ಒಂದು ದಾಖಲೆ ಎಂದರೆ ಸರಿ . ಅದು ಕಚೇರಿಯಲ್ಲಿ ಇರಬಹುದು . ಅಂತಹ ಯಾವುದೆ ದಾಖಾಲತಿಗಳು ಇಲ್ಲ ಏಕೆಂದರೆ ನೀವು ಆ ದಿನ ನೀವು ಹೇಳಿದ ಸ್ಥಳಕೆ ಹೊದದ್ದು ಇಲ್ಲ ಎಂದರೆ ಸರಿಯಲ್ಲ .ನಿಜವಾಗಿ ಅದು ಇದ್ದಿದ್ದರೆ ಅದನ್ನು ಹಾಜರು ಪಡಿಸುತ್ತಿದ್ದರು ಎಂದರೆ ಸರಿಯಲ್ಲ . ಆ ದಿನ ಸುಂಕಸಾಳ ಗ್ರಾಮ ಪಂಚಾಯತನ ಎದುರಗಡೆ ಇರುವ ಕಂಪೌಡ ಗೆ ಮರೆಯಾಗಿ ನಾವು ಕುಳಿತುಕೊಂಡಿದ್ದೆವು . ಸದ್ರಿ ಪಂಚಾಯತ ಅಕ್ಕಪಕ್ಕ ದಲ್ಲಿ ಬ್ಯಾಂಕ ಗಳು , ಮನೆಗಳು, ಹೊಟೆಲ, ಅಂಗಡಿಗಳು ಇರುತ್ತವೆ ಎಂದರೆ ಸಮಯದಲ್ಲಿ ಅಲ್ಲಿ ಯಾರು ಇರಲಿಲ್ಲ . ಪಂಚನಾಮೆ ಸಮಯದಲ್ಲಿ ನಿಮ್ಮ ಇಲಾಖಾ ಸಿಬ್ಬಂದಿಯವರ ಅಂಗ ಜಪ್ತಿ ಮಾಡಿ ಕೊಳ್ಳುತ್ತೀರಾ ಎಂದರೆ ಇಲ್ಲ . ನೀವು ಆ ದಿನ ರಾತ್ರಿ ಸಮಯದಲ್ಲಿ ಹೋಗುವಾಗ ಬೆಳಕಿನ ಸಲುವಾಗಿ ವ್ಯವಸ್ಥೆ ಮಾಡಿ ಕೊಂಡಿದ್ದರ ಬಗ್ಗೆ ಯಾವುದಾರೂ ದಾಖಲೆ ಹಾಜರ ಪಡಿಸಿದ್ದೀರಾ ಎಂದರೆ ನಾವು ಯಾವಾಗಲೂ ರಾತ್ರಿ ಪಾಳಿಯಲ್ಲಿ ಕೆಲಸಕ್ಕೆ ಹೋಗುವಾಗ ಟಾರ್ಚ ಇಟ್ಟು ಕೊಂಡು ಹೋಗುತ್ತೇವೆ . ಯಾವ ಟಾರ್ಚ ಹಗೂ ಯಾರ ಟಾರ್ಚ ಎಂದು ಪಂಚನಾಮೆಯಲ್ಲಿ ಬರೆದಿರುತ್ತಿರಾ ಎಂದರೆ ಇಲ್ಲ . ನಿಪಿ-5 ರ 2 ಪೊಟೊ ವನ್ನು ಕಾರಿನ ಒಳಗಡೆ ಹೋಗಿ ಹೊಡೆದಿದ್ದ ಎಂದರೆ ಕಾರಿನ ಹೊರಗಡೆ ಯಿಂದ ಹೊಡೆದಿರುತ್ತೆವೆ ನಿಪಿ-5 ರ 2 ನೇ ಪೊಟೊದಲ್ಲಿ ಕಾರಿನ ಹೊರಗಡೆಯಿಂದ

ಟಾರ್ಚ ಹೊಡೆದು ಪೊಟೊ ತೆಗೆದಿರುವುದು ಕಾಣುತ್ತದೆ . ಸದ್ರಿ ಬೆಳಕು ದೀಪದ ಬೆಳಕು ತರಹ ಕಾಣುತ್ತಿರುತ್ತದೆ ಎಂದರೆ ಸರಿಯಲ್ಲ . ಈ ರೀತಿ ವಸ್ತುಗಳನ್ನು ಕಾರಿನಲಿ ನಿವೇ ಇಟ್ಟು ಅಥವಾ ಯಾರಾದರೂ ಈ ರೀತಿಯಾಗಿ ನಿಪಿ–5 ರಂತೆ ಪೊಟೊ ತೆಗೆಯಬಹುದು ಎಂದರೆ ಸರಿ . ನ್ಯಾಯಾಲಂದ ಮುಂದೆ ನಿಪಿ–3 ರ ಪೊಟೊದಲ್ಲಿ ಕಾಣಿಸಲಾದ ಚೆರಿಗಳು ಮತ್ತು ಇತರ ಪರಿಕರಗಳು ಸಹಜವಾಗಿ ಎಲ್ಲಾ ಅಂಗಡಿಗಳಲ್ಲಿ ದೊರೆಯುತ್ತದೆ ಎಂದರೆ ಸರಿ . ನಿಪಿ–3 ರ ಪೊಟೊದಲ್ಲಿ ಬಂದೂಕು ಕಾಣಿಸುತ್ತದೆಯಾ ಎಂದರೆ ಇಲ್ಲ . ಬಂದೂಕೂ ಇಲ್ಲದೆ ಬೇಟೆಯಾಡಲು ಆಗುವುದಿಲ್ಲ ಎಂದರೆ ಕಲ್ಲುಗಳಿಂದ ಮತ್ತು ಉರುಳು ಹಾಕಿ ಬೇಟೆ ಯಾಡಬಹುದು . ಸದ್ರಿ ಪ್ರರಣದಲ್ಲಿರುವ ಬೇಟೆಯನ್ನು ನನ್ನ ಅಭಿಪ್ರಾಯದಲ್ಲಿ ಚೆರಿ ಮತ್ತು ರಾಡ್ ಇರುವುದರಿಂದ ಅದು ಬಂದೂಕಿನಿಂದ ಬೇಟೆಯಾಡಲಾಗಿರುತ್ತದೆ . ನಿಪಿ–3 ರ ಪೊಟೊದಲ್ಲಿ ಕಾಣಿಸಿದಂತಹ ಪರಿಕರಗಳಿಂದ ಬೇಟೆಯಾಡಲು ಸಾಧ್ಯ ಇಲ್ಲ ಎಂದರೆ ಸರಿ . ನಿಪಿ–2 ನ್ನು ನಾನು ಬರೆದಿಲ್ಲ . ಅದನ್ನು ಯಾರು ಬರೆದಿದ್ದು ಎಂದರೆ ಬಿ. ಜಿ .ಸುಂಕಸಾಳ ಎಂಬುವವರು ಬರೆದಿರುತ್ತಾರೆ . ದಸ್ತುರ ಎಂದರೆ ಯಾರು ಎಂದರೆ ಬರೆದಿರುವವರನ್ನು ದಸ್ತುರ ಎಂದು ಕರೆಯುತ್ತಾರೆ . ಸದ್ರಿ ಮಾಂಸವನ್ನು ಎಲ್ಲಿಂದ ತರಲಾಗಿತ್ತು ಎಂದು ನೀವು ಆ ನಂತರದಲ್ಲಿ ತಿಳಿದುಕೊಂಡಿರುತ್ತಿರಾ ಎಂದರೆ ಇಲ್ಲ ಅದು ತನಿಖಾಧಿಕಾರಿಗೆ ಬಿಟ್ಟದ್ದು . ನಿಪಿ–2 ರಿಂದ 5 ರ ದಾಖಲಾತಿಗಳನ್ನು ನೀವು ಮತ್ತು ನಿಮ್ಮ ಇಲಾಖೆಯವರು ನಿಮ್ಮ ಮೇಲಾಧಿಕಾರಿಗಳಿಂದ ಪ್ರಶಂಸೆ ಪಡೆದು ಕೊಳ್ಳಲು ಸೃಷ್ಟಿಸಿದ ದಾಖಲಾತಿ ಎಂದರೆ ಸರಿಯಲ್ಲ . ನೀವು ಹೇಳುವಂತೆ ಆ ಸಮಯದಲ್ಲಿ ಕಾಡು ಕುರಿಯ ಬೇಟೆ ಮಾಡಲಾಗಿರಲಿಲ್ಲ ಎಂದರೆ ನನಗೆ ಗೂತ್ತಿಲ್ಲ. ನೀವು ನಿಮ್ಮ ಮೇಲಾಧಿಕಾರಿ ಬಳಿಯಲ್ಲಿ ನಾವು ರಾತ್ರಿ ಸಮಯದಲ್ಲಿ ಇಷ್ಟು ಚೆನ್ನಾಗಿ ಕರ್ತವ್ಯ ನಿವರ್ವಹಿಸುತ್ತೇವೆ ಎಂದು ಪ್ರಶಂಸೆ ದಿಟ್ಟಿಸಿಕೊಳ್ಳಲು ಈ ಪ್ರಕರಣದಲ್ಲಿರುವ ಎಲ್ಲಾ ದಾಖಲಾತಿ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಅದಕ್ಕೆ ಪೂರಕವಾಗಿ ನಿಮ್ಮ ದಿನಗೂಲಿ ನೌಕರರನ್ನೆ ಖಾಯಂ ಪಂಚರನ್ನಾಗಿ ಕರೆದು ಕೊಂಡು ಅವರ ಸಹಿ ಪಡೆದು ಕೊಳ್ಳುವುದು ಎಂದರೆ ಸರಿಯಲ್ಲ . ಪಂಚನಾಮೆಯಲ್ಲಿರುವ ಸಹಿಗಳನ್ನು ನೀವು ಮಾಸ್ತಿಕಟ್ಟಾ ಕಚೇರಿಯಲ್ಲಿ ಪಡೆದು ಕೊಂಡದ್ದು ಎಂದರೆ ಪೂರ್ತಿ ಪಂಚನಾಮೆ ಸ್ಥಳದಲ್ಲಿ ಮಾಡಿ ನಂತರದಲ್ಲಿ ಮಾಸ್ತಿಕಟ್ಟಾ ಕಚೇರಿಯಲ್ಲಿ ಪಂಚರ ಸಹಿ

ಪಡೆದುಕೊಂಡಿರುವುದು . ಅದು ಆ ವಾಹನದಿಂದ ಜಪ್ತು ಮಾಡಿ ಕೊಂಡ ಪರಿಕರಗಳು ಅಲ್ಲ ಎಂದರೆ ಸರಿಯಲ್ಲ .

7. ನನ್ನ ಪ್ರಕಾರ ಸ್ಧ್ರಿ ವಾಹನ 1 ನೇ ಆರೋಪಿಯದ್ದು ಆಗಿರುತ್ತದೆ ಅವರ RC ಯನ್ನು online ದಲ್ಲಿ ಚೆಕ್ ಮಾಡಿರುತ್ತೆವೆ .ಆ ವಿಷಯವನ್ನು ಪಂಚನಾಮೆಯಲ್ಲಿ ಬರೆಸಿರುತ್ತಿರಾ ಎಂದರೆ ಇಲ್ಲ . ವಾಹನಕ್ಕೆ ಸಂಬಂಧಿಸಿದಂತೆ ಯಾವುದೆ ಹಾರ್ಡ ಕಾಪಿಯನ್ನು ನಾನು ಹಾಜರ ಪಡಿಸಿಲ್ಲ ಅದು ತನಿಖಾಧಿಕಾರಿಗೆ ಬಿಟ್ಟದ್ದು . ನೀವು ಹೇಳುವಂತಹ ವಾಹನ ಯಾವ ಸಂದರ್ಬ ದಲ್ಲಿ ಸುಂಕಸಾಳ ಗ್ರಾಮದಲ್ಲಿ ಇರಲಿಲ್ಲ ಎಂದರೆ ಆ ಸಮಯದಲ್ಲಿ ನಾನು ಕೂಡ ಒಂದು ಪೊಟೊ ಹೊಡೆದಿರುತ್ತೇನೆ . ಅದನ್ನು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತಿರಾ ಎಂದರೆ ಇಲ್ಲ . ಹಾಗಾದರೆ ಎಲ್ಲಾ ಪೊಟೊಗಳನ್ನು ಯಾರು ಹೊಡೆದದ್ದು ಎಂದರೆ ಎಲ್ಲರ ಕೈಯಲ್ಲಿ ಮೊಬೈಲ ಇರುತ್ತದೆ .ಎಲ್ಲರೂ ಸಣ್ಣ ವಿಡಿಯೊ ಹಾಗೂ ಪೊಟೊ ತೆಗೆಯುತ್ತಿದ್ದರು . ಅರದಲ್ಲಿ ಯಾರು ಈ ಪ್ರಕರಣದಲ್ಲಿರುವ ಪೊಟೊವನ್ನು ಪಡೆದಿರುತ್ತಾರೆ ಎಂದು ನನಗೆ ಹೇಳಲು ಬರುತ್ತಿಲ್ಲ ಅದನ್ನು ಸಹ ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

8. ಜಪ್ತು ಪಡಿಸಿಕೊಂಡೆವು ಎಂದು ಹೇಳಲಾದ ವಾಹನವನ್ನು ಸುಂಕಸಾಳದಿಂದ ಮಾಸ್ತಿಕಟ್ಟಾಗೆ ರಾಮನಾಥ ಎಂದು ತೆಗೆದು ಕೊಂಡುಬಂದಿರುತ್ತಾರೆ ಅವರು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ . ರಾಮನಾಥ ರವರು ಸ್ಧ್ರಿ ವಾಹನವನ್ನು ಸುಂಕಾಸಾಳದಿಂದ ಮಾಸ್ತಿಕಟ್ಟಾಗೆ ತಂದಿರುತ್ತಾರೆ ಮಹಜರ ದಲ್ಲಿ ನಮೂದಿಸಲಾಗಿಲ್ಲ . ಆ ಸಮಯದಲ್ಲಿ ಆ ವಾಹನದಲ್ಲಿ ರಾಮನಾಥ ಒಬ್ಬರೇ ಇದ್ದರು . ಅವರೆ ಚಾಲನೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈ ವಾಹನವನ್ನು ನಾವು ಈ ಪ್ರಕರಣ ಗೊಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ . ಆರೋಪಿಯ ಬಗೆಗ ಹೇಳುವುದು ಮತ್ತು ಅವರ ಹೇಳಿಕೆ ಬಗ್ಗೆ ಹೇಳುವುದು ಎಲ್ಲಾ ನೀವು ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ . ನೀವು ಹೇಳುವಂತಹ ಯಾವುದೆ ಘಟನೆ ಆ ದಿನ ಸುಂಕಸಾಳ ದಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ . ಸ್ಧ್ರಿ ಪ್ರಕರಣದಲ್ಲಿ ನಿವೇ ಎಲ್ಲಾ ಶಾಮಿಲಾಗಿ ಮಾಂಸ ಮತ್ತು ಇತರ ಪರಿಕರಗಳನ್ನು ಸೃಷ್ಟಿ ಮಾಡಿ ಕೊಂಡಿರುವುದು ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.